# ಭಾಗವತದ ಸಾರತತ್ತ್ವ

ಸ್ವಾಮಿ ರಂಗನಾಥಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ಮಾನವ ಜೀವನದ ಶ್ರೇಷ್ಠತೆ

ಮಾನವ ಜನ್ಮದ ಶ್ರೇಷ್ಠತೆಯ ವಿಷಯವು ಉಪನಿಷತ್ತುಗಳು, ಭಾಗವತ ಮತ್ತು ಬುದ್ಧನ ಬೋಧನೆಗಳಲ್ಲಿ ಮತ್ತೆ ಮತ್ತೆ ಬರುತ್ತದೆ. ಮಾನವನಲ್ಲಿ ದಿವ್ಯತೆಯು ಸುಪ್ತವಾಗಿದೆ, ಮತ್ತು ಅದನ್ನು ಈ ದೇಹದಲ್ಲಿರುವಾಗಲೇ, ಈ ಜನ್ಮದಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳಬಹುದು. ಜ್ಞಾನ ಮತ್ತು ಭಕ್ತಿ ಮಾರ್ಗಗಳ ಮೂಲಕ ಇಲ್ಲಿ, ಈಗಲೇ ಆಧ್ಯಾತ್ಮಿಕ ಸಾಕ್ಷಾತ್ಕಾರ ಪಡೆಯಬಹುದು, ಅದು ಸಾವಿನನಂತರವೇ ಪಡೆಯಬಹುದಾದ ಸ್ಥಿತಿಯಲ್ಲ ಎಂಬುದನ್ನು ಈ ಶಾಸ್ತ್ರಗಳು ಸಾರುತ್ತವೆ. ಭಾಗವತದ ಐದನೆಯ ಸ್ಕಂಧದಲ್ಲಿ ಬರುವ ಒಂದು ಪ್ರಸಿದ್ಧ ಶ್ಲೋಕವು ಭಾರತವರ್ಷದಲ್ಲಿ ಜನಿಸುವುದೇ ಒಂದು ಸೌಭಾಗ್ಯವೆಂದು ಸಾರುತ್ತದೆ:

ಏತದೇವ ಹಿ ದೇವಾ ಗಾಯಂತಿ—
ಅಹೋ ಅಮೀಷಾಂ ಕಿಮಕಾರಿ ಶೋಭನಂ
ಪ್ರಸನ್ನ ಏಷಾಂ ಸ್ವಿದುತ ಸ್ವಯಂ ಹರಿಃ ।
ಯೈರ್ಜನ್ಮ ಲಬ್ಧಂ ನೃಷು ಭಾರತಾಜಿರೇ
ಮುಕುಂದ ಸೇವೌಪಯಿಕಂ ಸ್ಪೃಹಾ ಹಿ ನಃ ॥೫.೧೯.೨೧॥

"ದೇವತೆಗಳು ಹೀಗೆ ಹಾಡುತ್ತಾರೆ : ಇವರೆಲ್ಲ ಭಾರತದಲ್ಲಿ ಮನುಷ್ಯರಾಗಿ ಹುಟ್ಟಬೇಕಾದರೆ ಎಂಥ ಪುಣ್ಯ ಮಾಡಿರಬೇಕು! ಅಂತರ್ಯಾಮಿಯಾದ ಮುಕುಂದನನ್ನು ಪೂಜಿಸುವ ಅರ್ಹತೆಯನ್ನು ಪಡೆದಿರುವ ಅವರೇ ಧನ್ಯರು. ಶ್ರೀಹರಿಯು ಅವರಲ್ಲಿ ಪ್ರಸನ್ನನಾಗಿದ್ದಾನೆ. ನಾವು ಅತ್ಯಂತವಾಗಿ ಬಯಸುವುದೂ ಅದನ್ನೇ."

ಕಲ್ಪಾಯುಷಾಂ ಸ್ಥಾನಜಯಾತ್ಪುನರ್ಭವಾತ್
ಕ್ಷಣಾಯುಷಾಂ ಭಾರತಭೂಯಜೋ ವರಮ್ ।
ಕ್ಷಣೇನ ಮರ್ತ್ಯೇನ ಕೃತಂ ಮನಸ್ವಿನಃ
ಸಂನ್ಯಸ್ಯ ಸಂಯಾಂತ್ಯಭಯಂ ಪದಂ ಹರೇಃ
॥ ೫.೧೯.೨೩ ॥

"ಭಾರತದಲ್ಲಿ ಜನ್ಮವೆತ್ತಿ ಒಂದು ಕ್ಷಣ ಬಾಳುವುದೂ ಕೂಡ ಸ್ವರ್ಗದಲ್ಲಿ ಒಂದು ಕಲ್ಪ ಇದ್ದು ಮತ್ತೆ (ಪುಣ್ಯತೀರಿದ ಮೇಲೆ) ಭೂಮಿಯ ಮೇಲೆ ಹುಟ್ಟುವುದಕ್ಕಿಂತ ಎಷ್ಟೋ ಒಳ್ಳೆಯದು. ಏಕೆಂದರೆ ಅಲ್ಲಿ ಜನರು ಕ್ಷಣಿಕ ಮರ್ತ್ಯಜೀವನದಲ್ಲಿ ಮಾಡಿದ ಕರ್ಮಗಳನ್ನು ಶ್ರೀಹರಿಗೆ ಸಮರ್ಪಿಸಿ, ಅವನ ಪಾದಪದ್ಮದಲ್ಲಿ ಅಭಯವನ್ನು ಹೊಂದುತ್ತಾರೆ."

ಯದ್ಯತ್ರ ನಃ ಸ್ವರ್ಗಸುಖಾವಶೇಷಿತಂ
ಸ್ವಿಷ್ಟಸ್ಯ ಸೂಕ್ತಸ್ಯ ಕೃತಸ್ಯ ಶೋಭನಮ್ ।
ತೇನಾಜನಾಭೇ ಸ್ಮೃತಿಮಜ್ಜನ್ಮ ನಃ ಸ್ಯಾತ್
ವರ್ಷೇ ಹರಿರ್ಯದ್ಭಜತಾಂ ಶಂ ತನೋತಿ
॥ ೫.೧೯.೨೮ ॥

"ಈ ಸ್ವರ್ಗಸುಖವನ್ನು ಅನುಭವಿಸಿದ ನಂತರ ಉಳಿಯುವ ಅಲ್ಪಸ್ವಲ್ಪ ಪುಣ್ಯದ ಸಹಾಯದಿಂದ ಹರಿಯನ್ನು ಸ್ಮರಿಸುವವರಾಗಿ ಭಾರತದಲ್ಲಿ ಜನ್ಮವನ್ನು ಪಡೆಯೋಣ. ಏಕೆಂದರೆ ಶ್ರೀಹರಿಯು ತನ್ನ ಭಕ್ತರಿಗೆ ಶುಭವನ್ನು ಉಂಟುಮಾಡುತ್ತಾನೆ."

ಭೂಮಿಯ ಮೇಲಿನ ಜೀವನ ಸ್ವರ್ಗಜೀವನಕ್ಕಿಂತ ಎಷ್ಟೋ ಮೇಲು ಎಂಬುದು ಮೇಲಿನ ಶ್ಲೋಕಗಳಿಂದ ತಿಳಿದು ಬರುತ್ತದೆ. ಉಪನಿಷತ್ತುಗಳು ಸ್ವರ್ಗದಲ್ಲಿರುವ ನಮ್ಮ ನಂಬಿಕೆಯನ್ನು ಆಸ್ಫೋಟಿಸಿವೆ. ಸ್ವರ್ಗಕ್ಕೆ ಹೋಗಲು ಇಲ್ಲಿ ಯಾಗ ಯಜ್ಞಾದಿಗಳನ್ನು ಮಾಡುವವರು ಮೂರ್ಖರು ಎಂದು ಅವು ಹೇಳುತ್ತವೆ. ದೇವತೆಗಳು ಮಾನವರಾಗಿ ಹುಟ್ಟಲು ಬಯಸಿದರೆ, ನಾವು ಸ್ವರ್ಗಕ್ಕೆ ಹೋಗಲು ಬಯಸುತ್ತೇವೆ! ಎಲ್ಲವೂ ಇಲ್ಲಿಯೇ, ಈ ಪ್ರಪಂಚದಲ್ಲಿಯೇ, ಈ ಜೀವನದಲ್ಲಿಯೇ ಇದೆ. ನೀವು ಬ್ರಹ್ಮಸ್ವರೂಪರು, ಅನಂತರು, ಸಾಂತರಲ್ಲ ಎಂದು ಉಪನಿಷತ್ತುಗಳು ಹೇಳುತ್ತವೆ. ಮಾನವನ ಘನತೆಯನ್ನು ವ್ಯಕ್ತಪಡಿಸುವ ಮತ್ತು ವಿವರಿಸುವ ಅನೇಕ ವಾಕ್ಯಗಳು ಉಪನಿಷತ್ತುಗಳಲ್ಲಿ ಬರುತ್ತವೆ. ಆದರೆ ನಾವು ಅವನ್ನೆಲ್ಲ ಮರೆಯುತ್ತೇವೆ. ಭಾಗವತದಲ್ಲಿಯೂ ಈ ಭಾವನೆ ಮತ್ತೆ ಮತ್ತೆ ಬರುತ್ತದೆ. ಈ ಭೂಮಿಯೇ ಸರ್ವಸ್ವ ಎಂದು ಅದು ಹೇಳುತ್ತದೆ. ಇಲ್ಲಿ ನಾವು ಎಲ್ಲವನ್ನೂ ಮಾಡಬಹುದು, ನಮ್ಮ ನೈಜ ಸ್ವರೂಪವನ್ನು ಇಲ್ಲಿ ಸಾಕ್ಷಾತ್ಕರಿಸಿಕೊಳ್ಳಬಹುದು. ಆದ್ದರಿಂದಲೆ 'ಇಹ' (ಇಲ್ಲಿ) ಎಂಬ ಶಬ್ದವನ್ನು ಉಪನಿಷತ್ತುಗಳು, ಭಾಗವತ ಮತ್ತು ಗೀತೆಗಳಲ್ಲಿ ಮತ್ತೆ ಮತ್ತೆ ಉಪಯೋಗಿಸಲಾಗಿದೆ. ಇಹ ಎಂದರೆ ಈ ಭೂಮಿಯ ಮೇಲೆಯೇ ದಿವ್ಯತೆಯ ಅತ್ಯುನ್ನತ ಸಾಕ್ಷಾತ್ಕಾರವನ್ನು ಪಡೆಯಬಹುದು. ಶುಕನು ಅದನ್ನು ಪಡೆದನು, ನಾವೂ ಅದನ್ನು ಪಡೆಯಬಹುದು. ಹೀಗೆ ಮಾನವವ್ಯಕ್ತಿತ್ವದ ಪ್ರಾಶಸ್ತ್ಯವನ್ನು ಮತ್ತೆ ಮತ್ತೆ ಕೊಂಡಾಡಲಾಗಿದೆ.

ಇಂದು ಆಧುನಿಕ ಜೀವಶಾಸ್ತ್ರಜ್ಞರು ಮಾನವನ ವಿಶಿಷ್ಟತೆಯ ಬಗ್ಗೆ ಹೇಳುತ್ತಾರೆ. ಮಾನವನು ದೇವರ ವಿಶೇಷ ಸೃಷ್ಟಿ ಎಂಬ ಕ್ರೈಸ್ತ ದೇವತಾಶಾಸ್ತ್ರದ ಅಭಿಪ್ರಾಯವನ್ನು ಹಿಂದೆ ಜೀವಶಾಸ್ತ್ರಜ್ಞರು ಅಲ್ಲಗೆಳೆಯುತ್ತಿದ್ದರು. ಡಾರ್ವಿನ್ ಮುಂತಾದ ವಿಜ್ಞಾನಿಗಳು ಆ ಸಿದ್ಧಾಂತವನ್ನು ಸಂಪೂರ್ಣ ತಿರಸ್ಕರಿಸಿದರು. ಅವರ ಪ್ರಕಾರ ಜೀವವಿಕಾಸದ ಸರಪಳಿಯಲ್ಲಿ ಮಾನವನು ಒಂದು ಕೊಂಡಿ ಅಷ್ಟೆ. ಆದರೆ ಮಾನವನ ವಿಶಿಷ್ಟತೆಯನ್ನು ಗುರುತಿಸಲೇಬೇಕಾಗುತ್ತದೆ. ಮಾನವನು ಜಗತ್ತನ್ನು ಅರಿಯಬಲ್ಲ, ಅದನ್ನು ನಿಗ್ರಹಿಸಬಲ್ಲ. ಮಾನವನಲ್ಲಿ ವಿಶೇಷ ಆಧ್ಯಾತ್ಮಿಕ ಅಭಿವ್ಯಕ್ತಿಯಿದೆ. ಇದು ಬೇರೆ ಯಾವ ಪ್ರಾಣಿಗಳಲ್ಲಿಯೂ ಇಲ್ಲ. ಶಂಕರಾಚಾರ್ಯರು ಬ್ರಹ್ಮಸೂತ್ರ ಭಾಷ್ಯದಲ್ಲಿ ಮನುಷ್ಯನ ಸ್ವರೂಪವನ್ನು ನಿತ್ಯ, ಶುದ್ಧ, ಬುದ್ಧ, ಮುಕ್ತವೆಂದು ವರ್ಣಿಸಿದ್ದಾರೆ. ನೀವು ಆ ಅನಂತ ಆತ್ಮ, ನೀವದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಈ ಮಾನವದೇಹಕ್ಕೆ ಜಗತ್ತನ್ನು ಹಾಗೂ ಆತ್ಮನನ್ನೂ ಕೂಡ ಅರಿಯುವ ಸಾಮರ್ಥ್ಯವಿದೆ. ಇದೇ ಮಾನವಜೀವಿಯ ವಿಶಿಷ್ಟತೆ. ಭಾಗವತದಲ್ಲಿ ಇದನ್ನು ಒತ್ತಿ ಹೇಳಲಾಗಿದೆ. ಶ್ರೀರಾಮಕೃಷ್ಣರು ಹೇಳುವಂತೆ, "ಇಲ್ಲಿಯೇ ಎಲ್ಲ ಎನ್ನುವುದು ಜ್ಞಾನ, ಎಲ್ಲವೂ ಅಲ್ಲಿ ಎನ್ನುವುದು ಅಜ್ಞಾನ." ಆದ್ದರಿಂದ 'ಇಹ' ಎಂಬ ಪದ ತುಂಬ ಅರ್ಥಪೂರ್ಣವಾಗಿದೆ. ಈ ಮಾನವ ಸನ್ನಿವೇಶವನ್ನು ಅಧ್ಯಯನ ಮಾಡಬೇಕು, ಮತ್ತು ಅದರ ಸಾಧ್ಯತೆಗಳನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಭೌತಿಕ ವಿಜ್ಞಾನವು ಪ್ರಕೃತಿಯ ಸಾಧ್ಯತೆಗಳನ್ನು ಅಧ್ಯಯನ ಮಾಡಿತು, ಪರಿಣಾಮವಾಗಿ ಪ್ರಕೃತಿಯಲ್ಲಿ ಅಡಗಿರುವ ಶಕ್ತಿಯ ಆವಿಷ್ಕಾರವಾಯಿತು. ಮಾನವನಲ್ಲಿ ಇನ್ನೂ ಅನಂತ ಸಾಧ್ಯತೆಗಳು ಅಡಗಿಕೊಂಡಿವೆ. ಇದನ್ನೇ ವೇದಾಂತ ಹೇಳುವುದು, ನಾವಿದನ್ನು ಇಂದು ಅರ್ಥಮಾಡಿಕೊಳ್ಳಬೇಕಾಗಿದೆ.

## ಪ್ರಹ್ಲಾದನ ಕಥೆ

ಈಗ ನಾವು ಭಾಗವತದ ಏಳನೆಯ ಸ್ಕಂಧಕ್ಕೆ ಬರೋಣ. ಅಲ್ಲಿ ಶ್ರೇಷ್ಠ ಭಗವದ್ಭಕ್ತನಾದ ಪ್ರಹ್ಲಾದನ ಸ್ವಾರಸ್ಯಕರ ಕಥೆ ಬರುತ್ತದೆ. ಪ್ರಹ್ಲಾದನು ಹಿರಣ್ಯಕಶಿಪುವಿನ ಮಗ, ಐದು ವರ್ಷದ ಬಾಲಕ. ತಾಯಿಯ ಗರ್ಭದಲ್ಲಿರುವಾಗಿನಿಂದಲೂ ಅವನು ಶ್ರೀಹರಿಯ ಪರಮ ಭಕ್ತ. ಆದರೆ ಹಿರಣ್ಯಕಶಿಪುವು ಹಿಟ್ಲರ್‌ನಂತೆ ನಿರಂಕುಶಪ್ರಭು. ಅವನು ಎಲ್ಲ ದೇವದೇವತೆಗಳನ್ನೂ ದ್ವೇಷಿಸುತ್ತಿದ್ದ. ಅವನಿಗೆ ತಾನೇ ದೇವರು, ತನಗಿಂತ ಮಿಗಿಲಿಲ್ಲ ಎಂಬ ಜಂಭ. ತನ್ನ ಮಗ ಪ್ರಹ್ಲಾದನೂ ತನ್ನಂತೆಯೇ ಇರಬೇಕೆಂಬುದು ಅವನ ಆಶಯ. ಆದರೆ ಪ್ರಹ್ಲಾದನು ಹೇಳಿದ: "ಅಪ್ಪಾ, ನೀನು ಕೇವಲ ಮನುಷ್ಯ, ಒಂದು ದಿನ ಮೃತನಾಗುತ್ತೀಯೆ. ಈ ಜೀವನವನ್ನು ತ್ಯಜಿಸಿ, ಕಾಡಿಗೆ ಹೋಗಿ ಪರಮಾತ್ಮನಾದ ಶ್ರೀಹರಿಯಲ್ಲಿ ಶರಣಾಗುವುದು ಒಳ್ಳೆಯದೆಂದು ನನ್ನ ನಂಬಿಕೆ." ಹಿರಣ್ಯಕಶಿಪುವಿಗೆ ಕೋಪ ಮಿತಿಮೀರಿ ಮಗನನ್ನು ಎಲ್ಲ ರೀತಿಯ ಹಿಂಸೆಗೆ ಒಳಪಡಿಸಿದನು. ಅವನು ಒಬ್ಬ ಗುರುವನ್ನು ನಿಯಮಿಸಿ ಬಾಲಕನ ಮನಸ್ಸಿನಲ್ಲಿರುವ ಭಗವದ್ಭಾವನೆಗಳನ್ನೆಲ್ಲ ಸಂಪೂರ್ಣ ನಿವಾರಿಸುವಂತೆ ಹೇಳಿದನು. ಆದರೆ ಪ್ರಹ್ಲಾದನ ಮನಸ್ಸು ಅತ್ಯಂತ ದೃಢ. ಗುರುವು ಇಲ್ಲದ ಸಮಯದಲ್ಲಿ ಇತರ ವಿದ್ಯಾರ್ಥಿಗಳನ್ನೆಲ್ಲ ಸೇರಿಸಿ ಗುರುವಿನ ತಪ್ಪು ಉಪದೇಶಗಳನ್ನು ಸ್ವೀಕರಿಸಬಾರದೆಂದು ಪ್ರೇರೇಪಿಸುತ್ತಿದ್ದ. ಅಂತಹ ಒಂದು ಸಂದರ್ಭದಲ್ಲಿ ಪ್ರಹ್ಲಾನು ಅವರನ್ನು ಉದ್ದೇಶಿಸಿ ಮಾತನಾಡುತ್ತಾನೆ. ಅದರಲ್ಲಿ ಬರುವ ಉನ್ನತ ಆಧ್ಯಾತ್ಮಿಕ ಭಾವನೆಗಳನ್ನೊಳಗೊಂಡ ಇಪ್ಪತ್ತೆಂಟು ಶ್ಲೋಕಗಳಲ್ಲಿ ಮುಖ್ಯವಾದ ಎರಡನ್ನು ನಾನು ಇಲ್ಲಿ ಹೇಳುತ್ತೇನೆ:

**ಕೌಮಾರ ಆಚರೇತ್ ಪ್ರಾಜ್ಞೋ ಧರ್ಮಾನ್ ಭಾಗವತಾನಿಹ ।**
**ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್ ॥**

"ಪ್ರಾಜ್ಞರಾದವರು ಈ ಜೀವನದಲ್ಲಿ ಚಿಕ್ಕಂದಿನಿಂದಲೂ ಭಾಗವತ ಧರ್ಮವನ್ನು ಆಚರಿಸುತ್ತಾರೆ. ಏಕೆಂದರೆ ಈ ಮಾನುಷ ದೇಹವು ದುರ್ಲಭವಾದುದು ಮತ್ತು ಅದು ಶಾಶ್ವತವಲ್ಲ, ಆದರೆ ಅದು ಶ್ರೇಷ್ಠಫಲವನ್ನು ನೀಡುವ ಸಾಮರ್ಥ್ಯವುಳ್ಳದ್ದು."

**ನ ಹ್ಯಚ್ಯುತಂ ಪ್ರೀಣಯತೋ**
**ಬಹ್ವಾಯಾಸೋಽಸುರಾತ್ಮಜಾಃ ।**
**ಆತ್ಮತ್ವಾತ್ ಸರ್ವಭೂತಾನಾಂ ಸಿದ್ಧತ್ವಾದಿಹ ಸರ್ವತಃ ॥**

"ಅಸುರಪುತ್ರರೇ, ಪರಮಾತ್ಮನಾದ ಅಚ್ಯುತನನ್ನು ತೃಪ್ತಿಪಡಿಸುವುದು ಬಹಳ ಸುಲಭ. ಏಕೆಂದರೆ ಅವನು ಎಲ್ಲರ ಆತ್ಮ ಮತ್ತು ಎಲ್ಲೆಲ್ಲಿಯೂ ವ್ಯಾಪಿಸಿರುವ ಸತ್ಯ."

ಇಲ್ಲಿ ಪ್ರಹ್ಲಾದ ಹೇಳುತ್ತಾನೆ, ಚಿಕ್ಕಂದಿನಿಂದಲೇ ಭಾಗವತ ಧರ್ಮವನ್ನು ಆಚರಿಸಬೇಕು, ಏಕೆಂದರೆ ಈ ಮಾನವ ಜನ್ಮ ದುರ್ಲಭ, ಮತ್ತು ಈ ಮಾನವಜನ್ಮದಲ್ಲಿ ಮಾತ್ರ ದೇವರ ಸಾಕ್ಷಾತ್ಕಾರ ಸಾಧ್ಯ ಎಂದು. ಆದ್ದರಿಂದ ಜ್ಞಾನಿಗಳು ಈ ಜನ್ಮದಲ್ಲಿಯೇ ದೇವರನ್ನು ಆರಾಧಿಸುತ್ತಾರೆ. ಈ ಭಾಗವತ ಧರ್ಮ ಯಾವುದು? ಅನಂತ, ಪ್ರೇಮಮಯ ಆತ್ಮನನ್ನು ತನ್ನಲ್ಲಿಯೂ ಇತರರಲ್ಲಿಯೂ ನೋಡುವುದು ಮತ್ತು ಅವನ ಸೇವೆ ಮಾಡುವುದು—ಇದೇ ಭಾಗವತ ಧರ್ಮ. ಇದರಿಂದ ಅಂತರ-ಮಾನವ ಸಂಬಂಧವು ಪ್ರೇಮಪೂರಿತವಾಗುತ್ತದೆ. ದಿವ್ಯತೆಯು ಎಲ್ಲರಲ್ಲಿಯೂ, ನನ್ನಲ್ಲಿಯೂ ಇದೆ. ಆದ್ದರಿಂದ ಇತರರೊಡನೆ ಸುಖಕರ ಸಂಬಂಧವನ್ನು ಬೆಳೆಸಿ ಮತ್ತು ಇತರರ ವಿಷಯದಲ್ಲಿ ಸೇವಾಮನೋಭಾವವನ್ನು ಹೊಂದಿ. ಈ ದೇಹ ಒಂದು ಉಪಕರಣ, ಯಾವಾಗ ಬೇಕಾದರೂ ಹೊರಟು

ಹೋಗಬಹುದು. ಆದ್ದರಿಂದ ಗಂಭೀರವಾಗಿ ಭಾಗವತ ಧರ್ಮವನ್ನು ಅಭ್ಯಸಿಸಿ.

ಎರಡನೆಯ ಶ್ಲೋಕದ ನ ಹಿ ಅಚ್ಯುತಂ ಪ್ರೀಣಯತೋ ... ಎಂಬುದರಲ್ಲಿ ಶುದ್ಧ ವೇದಾಂತ ಬೋಧನೆ ಇದೆ. ಅಚ್ಯುತ ಎಂಬುದು ಕೃಷ್ಣನ ಹೆಸರು. ಯಾರಿಗೆ ಚ್ಯುತಿಯಿಲ್ಲವೊ ಅವನು ಅಚ್ಯುತ. ಅವನನ್ನು ಪದಚ್ಯುತಮಾಡಲಾಗುವುದಿಲ್ಲ, ಸ್ಥಳಾಂತರಿಸಲಾಗುವುದಿಲ್ಲ. ಅವನು ನಾಶವಿಲ್ಲದ ಸತ್ಯ. ಆ ಅಚ್ಯುತನನ್ನು ತೃಪ್ತಿಪಡಿಸುವುದು ಸ್ವಲ್ಪವೂ ಕಷ್ಟವಲ್ಲ, ಏಕೆಂದರೆ ಅವನು ಅತ್ತಿತ್ತ ಸುಳಿಯುವವನಲ್ಲ. ಅವನು ಇಲ್ಲಿಯೇ ಇರುವನು, ಅವನನ್ನು ಆಗಲೇ ಪಡೆದಾಗಿದೆ. ಅವನು ನಿಮ್ಮವನೇ ಆದ ಅನಂತ ಆತ್ಮ. ಎಲ್ಲ ಅರ್ಥದಲ್ಲಿಯೂ ಅವನು ನಿಮ್ಮೊಳಗೇ ಅಡಗಿರುವ ಸಿದ್ಧ ಸತ್ಯ. ಅದನ್ನು ನೀವು ಕೇವಲ ಅನುಭವಿಸಬೇಕಾಗಿದೆ ಅಷ್ಟೆ. ಇದೇ ಪ್ರಹ್ಲಾದನ ಬೋಧನೆ.

ಕೊನೆಗೆ ನರಸಿಂಹನು ಬಂದು ಹಿರಣ್ಯಕಶಿಪುವನ್ನು ಕೊಲ್ಲುತ್ತಾನೆ. ನರಸಿಂಹನ ಉಗ್ರರೂಪವನ್ನು ಕಂಡು ಎಲ್ಲರೂ ಭಯಪಡುತ್ತಾರೆ. ಸ್ವಲ್ಪವೂ ಭಯವಿಲ್ಲದೆ ಇದ್ದವನೆಂದರೆ ಬಾಲಕ ಪ್ರಹ್ಲಾದ. ಅವನು ಮುಗುಳ್ನಕ್ಕು ನರಸಿಂಹನನ್ನು ಪ್ರಸನ್ನನಾಗುವಂತೆ ಪ್ರಾರ್ಥಿಸುತ್ತಾನೆ. ನರಸಿಂಹನು ಸಂಪ್ರೀತನಾಗಿ ವರವನ್ನು ನೀಡುತ್ತಾನೆ:

ಪ್ರಹ್ಲಾದ ಭದ್ರ ಭದ್ರಂ ತೇ
ಪ್ರೀತೋಽಹಂ ತೇಽಸುರೋತ್ತಮ ।
ವರಂ ವೃಣೀಷ್ವಾಭಿಮತಂ
ಕಾಮಪೂರೋಽಸ್ಮ್ಯಹಂ ನೃಣಾಮ್ ॥ ೭.೯.೫೨ ॥

"ಹೇ, ಪ್ರಹ್ಲಾದ, ಮಂಗಳಕರನೆ, ನಿನಗೆ ಎಲ್ಲ ರೀತಿಯ ಶುಭವುಂಟಾಗಲಿ. ಹೇ ಅಸುರೋತ್ತಮನೇ, ನಾನು ಸುಪ್ರೀತನಾಗಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳು. ಭಕ್ತನ ಬಯಕೆಗಳನ್ನೆಲ್ಲ ನಾನು ಪೂರ್ತಿಗೊಳಿಸುತ್ತೇನೆ."

ಆದರೆ ಪ್ರಹ್ಲಾದನು ದೇವರನ್ನು ಪ್ರೀತಿಗಾಗಿ ಪ್ರೀತಿಸಿದನು. ಆದ್ದರಿಂದ ಅವನು ಉತ್ತರಿಸಿದ:

ನಾನ್ಯಥಾ ತೇಽಖಿಲಗುರೋ ಘಟೇತ ಕರುಣಾತ್ಮನಃ ।
ಯಸ್ತ ಆಶಿಷ ಆಶಾಸ್ತೇ ನ ಸ ಭೃತ್ಯಃ ಸ ವೈ ವಣಿಕ್॥೭.೧೦.೪॥

"ಹೇ ಜಗದ್ಗುರುವೆ, ನೀನು ಕರುಣಾಮಯನಾಗಿ, ನನ್ನನ್ನು ಪರೀಕ್ಷಿಸುವುದಕ್ಕಲ್ಲದೆ ಮತ್ತಾವುದಕ್ಕಾಗಿಯೂ ಈ ರೀತಿ ಕೇಳುತ್ತಿರಲಿಲ್ಲ. ಭೃತ್ಯನಾದ ಭಕ್ತನು ತನ್ನ ಒಡೆಯನಿಂದ ಏನಾದರೂ ಬಯಸಿದರೆ ಅವನು ಭೃತ್ಯನಲ್ಲ, ವ್ಯಾಪಾರಿ."

"ನಾನು ಪ್ರೀತಿಯ ವಿಷಯದಲ್ಲಿ ವ್ಯಾಪಾರಿಯಲ್ಲ. ಪ್ರೀತಿಗಾಗಿಯೇ ನಾನು ನಿನ್ನನ್ನು ಪ್ರೀತಿಸುತ್ತೇನೆ, ಪ್ರತಿಯಾಗಿ ಏನನ್ನೂ ಬಯಸುವುದಿಲ್ಲ" ಎನ್ನುತ್ತಾನೆ ಪ್ರಹ್ಲಾದ. ಶ್ರೀರಾಮಕೃಷ್ಣರಿಗೆ ಪ್ರಹ್ಲಾದನ ಕಥೆ ತುಂಬ ಇಷ್ಟವಾಗಿತ್ತು. ಅವರು ಮಾತಿನ ಸಂದರ್ಭದಲ್ಲಿ ಆಗಾಗ ಪ್ರಹ್ಲಾದನನ್ನು ಪ್ರಸ್ತಾಪಿಸುತ್ತಾರೆ. ಅತ್ಯುನ್ನತ ಮಟ್ಟದ ಶುದ್ಧಪ್ರೀತಿಯನ್ನು ಪ್ರಹ್ಲಾದನಲ್ಲಿ ಕಾಣುತ್ತೇವೆ ಎಂದು ಹೇಳುತ್ತಿದ್ದರು ಅವರು.

ಭಕ್ತಿಶಾಸ್ತ್ರದಲ್ಲಿ ದೇವರನ್ನು ಶುದ್ಧಪ್ರೇಮಸ್ವರೂಪ ಎಂದು ವರ್ಣಿಸಲಾಗಿದೆ. ಇಂದಿನ ದಿನಗಳಲ್ಲಿ ಶುಷ್ಕತೆಯನ್ನು ಕಾಣುತ್ತೇವೆ. ಜನರು ಪ್ರೀತಿಸಲೂ ಆರರು, ಪ್ರೀತಿಯನ್ನು ಸ್ವೀಕರಿಸಲೂ ಆರರು. ಅಸ್ಥಿರ, ಚಂಚಲ ಪ್ರೀತಿಯನ್ನು ನಾವು ಅನುಭವಿಸುತ್ತೇವೆ, ಇದಕ್ಕಿಂತ ಉನ್ನತವಾದುದೇನನ್ನೂ ನಾವು ಅರಿಯೆವು. ನಮ್ಮ ಪ್ರೀತಿಯ ಅನುಭವವನ್ನು ಅಳೆಯುವ ಅಳತೆಗೋಲನ್ನು ಭಾಗವತ ಒದಗಿಸುತ್ತದೆ. ನಾವು ಉನ್ನತವೂ ಪರಿಶುದ್ಧವೂ ಆದ ಪ್ರೀತಿಯ ಆಯಾಮದಲ್ಲಿ ಮುಂದುವರಿಯುತ್ತಿರುವೆವೇ ಎಂಬುದನ್ನು ಪರೀಕ್ಷಿಸಲು ಅದು ಸಹಾಯಮಾಡುತ್ತದೆ. ಇದರಲ್ಲಿ ಬರುವ ಕೆಲವು ಕಥೆಗಳು ಅತ್ಯುನ್ನತ ಪ್ರೀತಿಯ ಉದಾಹರಣೆಗಳಾಗಿವೆ. ಹತ್ತನೆಯ ಸ್ಕಂಧದಲ್ಲಿ ಶ್ರೀಕೃಷ್ಣನನ್ನು ದ್ವೇಷಿಸುವುದರ ಮೂಲಕವೇ ಮುಕ್ತಿಯನ್ನು ಪಡೆದ ಕಂಸನ ಕಥೆ ಬರುತ್ತದೆ. ದ್ವೇಷವೂ ಪ್ರೀತಿಯ ರೂಪವಾಗಬಲ್ಲದು ಎಂಬುದನ್ನು ಇದು ತೋರಿಸುತ್ತದೆ.

ಈ ಗ್ರಂಥದಲ್ಲಿ ಉಕ್ತವಾಗಿರುವ ಭಕ್ತಿಯು ಭಗವಂತನೊಡನೆ ಭಕ್ತನಿಗಿರುವ ನಿಕಟತೆಯನ್ನು ಒತ್ತಿ ಹೇಳುತ್ತದೆ. ಅಂಥ ಭಕ್ತಿಯಲ್ಲಿ ಭಯ ಲೇಶಮಾತ್ರವೂ ಇರುವುದಿಲ್ಲ. ಭಕ್ತನು ದೇವರೊಡನೆ ಮಾತನಾಡುತ್ತಾನೆ, ಅವನ ಗುಣಗಾನ ಮಾಡುತ್ತಾನೆ, ಪ್ರೇಮೋನ್ಮಾದವನ್ನು ಅನುಭವಿಸುತ್ತಾನೆ ಮತ್ತು ದೇವರನ್ನೆ ಹರಸುತ್ತಾನೆ ಕೂಡ. ದಕ್ಷಿಣಭಾರತದ ವೈಷ್ಣವ ಶಾಸ್ತ್ರಗಳು ಭಕ್ತರು ಭಗವಂತನನ್ನು ಹರಸುವ ವಿಷಯವನ್ನು ಪ್ರಸ್ತಾಪಿಸುತ್ತವೆ. ಭಕ್ತನು ಹಾಗೆ ಮಾಡಬಲ್ಲ, ಏಕೆಂದರೆ ಅವನು ಭಗವಂತನ ಮುಂದೆ ಭಿಕ್ಷುಕನಾಗಿರುವುದಿಲ್ಲ. ಭಗವಂತನು ತನ್ನೊಳಗೇ ಇರುವುದರಿಂದ ಅವನು ಭಗವಂತನೊಡನೆ ತಾದಾತ್ಮ್ಯವನ್ನು ಅನುಭವಿಸುತ್ತಾನೆ. ಇದೊಂದು ಅದ್ಭುತ ಬೋಧನೆ. ಪ್ರಪಂಚದಲ್ಲಿ ಭಿಕ್ಷುಕನು ಎಂದೂ ಒಡೆಯನೊಂದಿಗೆ ಏಕತೆಯನ್ನು ಭಾವಿಸಲಾರ. ಶುದ್ಧಪ್ರೀತಿಯ ಉದಯದೊಂದಿಗೆ ಭಕ್ತನಲ್ಲಿ ಭಿಕ್ಷುಕ ಮನೋಭಾವ ಹೊರಟುಹೋಗುತ್ತದೆ.

ಹನ್ನೊಂದನೆಯ ಸ್ಕಂಧದಲ್ಲಿ ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ:

**ಯದೃಚ್ಛಯಾ ಮತ್‌ಕಥಾದೌ**
**ಜಾತಶ್ರದ್ಧಸ್ತು ಯಃ ಪುಮಾನ್ ।**

**ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ**
**॥ ೧೧.೨೦.೮ ॥**

"ಯಾವನಲ್ಲಿ ಸ್ವಾಭಾವಿಕವಾಗಿಯೇ ನನ್ನ ವಿಷಯದಲ್ಲಿ ಶ್ರದ್ಧೆ ಉಂಟಾಗುತ್ತದೊ, ಯಾವನು ಕೆಲಸವನ್ನು ಕಡೆಗಣಿಸದೆ ಅದರ ಫಲದಲ್ಲಿ ನಿರಾಸಕ್ತನಾಗಿರುವನೊ ಅವನು ಭಕ್ತಿಯೋಗ ದಿಂದ ಪ್ರಯೋಜನವನ್ನು ಪಡೆಯುತ್ತಾನೆ."

ನೀವು ರಸ್ತೆಯಲ್ಲಿ ಹೋಗುತ್ತಿರುವಿರಿ ಎಂದಿಟ್ಟುಕೊಳ್ಳಿ. ಒಂದು ಕಡೆ ಉಪನ್ಯಾಸ ನಡೆಯುತ್ತಿದೆ. ಭಗವತ್ಸಂಬಂಧವಾದ ಆ ಉಪನ್ಯಾಸವನ್ನು ಆಸಕ್ತಿಯಿಂದ ಕೇಳುತ್ತೀರಿ. ಅದರಿಂದ ನೀವು ಸ್ವಲ್ಪ ಸ್ಫೂರ್ತಿ ಪಡೆಯಬಹುದು. ಇದು ತಾನಾಗಿಯೇ (ಯದೃಚ್ಛಯಾ) ಲಭಿಸಿದ ಲಾಭ. ಆ ಮಾತುಗಳು ನಿಮ್ಮ ಮನಸ್ಸಿನಲ್ಲಿ ಕ್ರಮೇಣ  ಬೇರುಬಿಡುತ್ತವೆ. ನಿಮ್ಮಲ್ಲಿ ಈಗ ಸ್ವಲ್ಪ ಭಕ್ತಿ ಉದಯವಾಗುತ್ತಿದೆ. ಆದರೆ ನಿಮ್ಮಲ್ಲಿ ವೈರಾಗ್ಯ ತೀವ್ರವಾಗಿಲ್ಲ. ಆದರೂ ಅತಿಯಾದ ಆಸಕ್ತಿಯೂ ಇಲ್ಲ. ಅಂತಹ ವ್ಯಕ್ತಿಗೆ ಭಕ್ತಿಯೋಗ ಪರಿಣಾಮಕಾರಿಯಾಗುತ್ತದೆ, ಅದು ಕ್ರಮೇಣ ಅವನನ್ನು ಸಾಕ್ಷಾತ್ಕಾರದ ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಆದ್ದರಿಂದಲೇ ಭಕ್ತಿಯೋಗ ಎಲ್ಲರಿಗೂ ಅನ್ವಯವಾಗುವಂತಹದು. ಸಾಮಾನ್ಯ ಜನರೂ ಭಕ್ತಿಯೋಗ ವನ್ನು ಅನುಸರಿಸಬಹುದು. ಅವರಲ್ಲಿ ಸ್ವಲ್ಪ ಪ್ರಾಪಂಚಿಕ ಆಸಕ್ತಿ ಇದ್ದರೂ ಪರವಾಗಿಲ್ಲ, ಸ್ವಲ್ಪ ಪ್ರೀತಿ ಅವರ ಮನಸ್ಸನ್ನು ಪ್ರವೇಶಿಸಬೇಕಷ್ಟೆ.

ಇಂದು ಇಡೀ ಜಗತ್ತು ಪ್ರೀತಿಗಾಗಿ ಹಂಬಲಿಸುತ್ತಿದೆ. ಇಂದು ಜಗತ್ತು ತುಂಬ ಗೊಂದಲದಲ್ಲಿದೆಯೆಂದು ಬರ್ಟ್ರಾಂಡ್ ರಸಲ್ ಒಂದು ಕಡೆ ಹೇಳುತ್ತಾರೆ. ಮಾನವನ ಹೃದಯದಲ್ಲಿ ಒಂದು ಹನಿ ಪ್ರೀತಿಯಿದ್ದರೆ ಈ ಗೊಂದಲದಿಂದ ಪಾರಾಗ ಬಹುದು. ಸ್ವಲ್ಪ ಪರಹಿತಾಸಕ್ತಿ ಮಾನವನ ಹೃದಯದಲ್ಲಿದ್ದರೆ ಜಗತ್ತು ಹೆಚ್ಚು ವಾಸಯೋಗ್ಯವಾಗುತ್ತದೆ ಎಂದು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಸೊರೋಕಿನ್ ಹೇಳುತ್ತಾರೆ. ಈ ಪ್ರೀತಿಯ ಭಾವನೆಯನ್ನೇ ಭಾಗವತದಲ್ಲಿ ಅದ್ಭುತ ರೀತಿಯಲ್ಲಿ ನಿರೂಪಿಸಲಾಗಿದೆ. ಸಾಮಾನ್ಯ ಪ್ರಾಪಂಚಿಕ ಪ್ರೀತಿಯೂ, ಅದು ಸತ್ಯವಾಗಿದ್ದರೆ, ಶ್ರೇಷ್ಠವೇ. ಪ್ರೀತಿಯೆಂದರೆ ಕೇವಲ ನರಗಳ ಚೋದನೆಯಲ್ಲ. ಅದು ಇನ್ನೂ ಆಳವಾದುದು. ಅದಕ್ಕೆ ಆಧ್ಯಾತ್ಮಿಕ ಆಯಾಮವಿದೆ. ನಾನು ಎಲ್ಲೆಲ್ಲಿಯೂ "ಪ್ರೀತಿ, ಪ್ರೀತಿ, ಪ್ರೀತಿ" ಎಂಬ ಶಬ್ದವನ್ನು ಕೇಳುತ್ತೇನೆ. ಆದರೆ ಯಾರು ಪ್ರೀತಿಯನ್ನು ಅನುಭವಿಸುತ್ತಾರೊ ಅವರು ಅದರ ಬಗ್ಗೆ ಮಾತನಾಡುವುದಿಲ್ಲ. ಅದರ ಅನುಭವವಿಲ್ಲದವರು ಪ್ರೀತಿಯ ಬಗ್ಗೆ ಹಿಮಾಲಯದಷ್ಟು ಮಾತನಾಡುತ್ತಾರೆ. ನಿಜವಾಗಿಯೂ ನಮಗೆ ಹೇಗೆ ಪ್ರೀತಿಸಬೇಕೆಂಬುದು ತಿಳಿಯದು. ಪ್ರೀತಿ ಯೆಂಬುದು ಎರಡು ನಿಮಿಷಗಳ ಅಥವಾ ಎರಡು ದಿವಸಗಳ ಮಾತಲ್ಲ. ನೈಜ ಪ್ರೀತಿ ಶಾಶ್ವತವಾದುದು. ನೀವು ಸಾಮಾನ್ಯ ಪ್ರೀತಿಯೊಂದಿಗೆ ಪ್ರಾರಂಭಿಸಿ. ಆದರೆ ಅದನ್ನು ಬೆಳೆಸುತ್ತಾ, ಶುದ್ಧಗೊಳಿಸುತ್ತಾ ಹೋಗಿ, ಕೊನೆಗೆ ಅದರ ಉನ್ನತ ಮಟ್ಟಕ್ಕೆ ಏರುತ್ತೀರಿ. ಭಾಗವತವು ಈ ಎಲ್ಲ ಬಗೆಯ ಪ್ರೀತಿಯ ಕುರಿತು ಹೇಳುತ್ತದೆ.

"ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ ಎಂಬ ನಾಲ್ಕು ಬಗೆಯ ಜನರು ನನ್ನನ್ನು ಭಜಿಸುತ್ತಾರೆ" ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳುತ್ತಾನೆ (೭.೧೬). ಈ ನಾಲ್ವರಲ್ಲಿ ಜ್ಞಾನಿಯೇ ಅತ್ಯಂತ ಶ್ರೇಷ್ಠನೆಂದು ಕೃಷ್ಣ ಹೇಳುತ್ತಾನೆ. ಆದರೆ ಇವೆಲ್ಲವೂ ಪ್ರೀತಿಯ ವಿವಿಧ ಹಂತಗಳು. ಒಂದು ದಿನ ಶ್ರೀರಾಮಕೃಷ್ಣರು ಯುವಕನೊಬ್ಬನನ್ನು, "ನೀನು ಯಾರ ನ್ನಾದರೂ ಪ್ರೀತಿಸುತ್ತೀಯಾ?" ಎಂದು ಕೇಳಿದರು. ಅವನು "ಇಲ್ಲ" ಎನ್ನಲು, "ಎಂಥ ಶುಷ್ಕ ವ್ಯಕ್ತಿ ನೀನು!" ಎಂದರು ಶ್ರೀರಾಮಕೃಷ್ಣರು. ಆದ್ದರಿಂದ ಯಾರನ್ನಾದರೂ ಪ್ರೀತಿಸಿ. ಅನಂತರ ಆ ಪ್ರೀತಿಯನ್ನು ವೃದ್ಧಿಸಬಹುದು, ಪವಿತ್ರವೂ ಉದಾತ್ತವೂ ಆಗುವಂತೆ ಮಾಡಬಹುದು. ಆದರೆ ಮೊದಲು ಪ್ರೀತಿಯ ಸಾಮರ್ಥ್ಯವನ್ನು ಹೊಂದಿರಬೇಕು. ಇದೇ ಭಾಗ ವತದ ಬೋಧನೆ.

### ಗಜೇಂದ್ರ ಮೋಕ್ಷ

ಭಾಗವತದ ಎಂಟನೆಯ ಸ್ಕಂಧದಲ್ಲಿ ಗಜೇಂದ್ರ ಮೋಕ್ಷ ಪ್ರಸಂಗ ಬರುತ್ತದೆ. ಗಜೇಂದ್ರನು ಹಾಡಿದ ಸ್ತೋತ್ರದಲ್ಲಿ ಅತ್ಯುನ್ನತ ವೇದಾಂತ ಬೋಧನೆ ಅಡಕವಾಗಿದೆ. ಅದರಲ್ಲಿ ಎರಡು ಶ್ಲೋಕಗಳು ಹೀಗಿವೆ:

**ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।**
**ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥೮.೩.೨॥**

"ಓಂ, ಭಗವಂತನಿಗೆ ವಂದನೆಗಳು. ಅವನ ಸಂನ್ನಿಧಿಯಿಂದ ಈ ಜಗತ್ತು ಚೇತನಾತ್ಮಕವಾಗಿದೆ. ಅವನೇ ಎಲ್ಲರ ಆತ್ಮ. ಎಲ್ಲದರ ಮೂಲಬೀಜವಾದ ಆ ಪರೇಶನನ್ನು ಕುರಿತು ಧ್ಯಾನಿಸುತ್ತೇನೆ."

**ಯಸ್ಮಿನ್ನಿದಂ ಯತಶ್ಚೇದಂ**
**ಯೇನೇದಂ ಯ ಇದಂ ಸ್ವಯಮ್ ।**
**ಯೋಽಸ್ಮಾತ್ ಪರಸ್ಮಾಚ್ಚ**
**ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥೮.೩.೩॥**

"ಯಾರಲ್ಲಿ ಈ ಜಗತ್ತಿರುವುದೊ, ಯಾರಿಂದ ಈ ಜಗತ್ತು ಬಂದಿರುವುದೊ, ಯಾರಿಗೆ ಈ ಜಗತ್ತು ಸೇರಿರುವುದೊ, ಯಾರು ಈ ಜಗತ್ತೇ ಆಗಿರುವನೊ ಮತ್ತು ಯಾರು ಈ ಜಗತ್ತನ್ನೂ ಮೀರಿರುವನೊ ಆ ಸ್ವಯಂಭುವಿನಲ್ಲಿ ನಾನು ಶರಣಾಗುತ್ತೇನೆ."

## ಸಮುದ್ರ ಮಂಥನ

ಎಂಟನೆ ಸ್ಕಂಧದ ಏಳನೆಯ ಅಧ್ಯಾಯದಲ್ಲಿ ಸಮುದ್ರ ಮಂಥನದ ವಿಷಯ ಬರುತ್ತದೆ. ಅಲ್ಲಿ ದೇವತೆಗಳು ಮತ್ತು ಅಸುರರು ಸಮುದ್ರವನ್ನು ಕಡೆಯುವುದರಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಕಡೆಯುವುದು ಮುಂದುವರಿದಂತೆ ಅನೇಕ ಒಳ್ಳೆಯ ವಸ್ತುಗಳು ದೊರಕಿದವು, ಹಾಗೆಯೇ ಕಾಲಕೂಟವೆಂಬ ಭಯಂಕರ ವಿಷವೂ ಸಮುದ್ರದಿಂದ ಮೇಲೆದ್ದಿತು. ಅದು ಇಡೀ ಜಗತ್ತನ್ನೇ ದಹಿಸುತ್ತಿತ್ತು. ಆ ವಿಷವನ್ನು ಯಾರೂ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ. ದೇವತೆಗಳಿಗೆ ದಿಗಿಲಾಯಿತು. ಅವರು ಪರಿಹಾರಕ್ಕಾಗಿ ಬ್ರಹ್ಮನೆಡೆಗೆ ಹೋದರು. ಆದರೆ ಬ್ರಹ್ಮನು ಹೇಳಿದ : "ಕ್ಷಮಿಸಿ, ನಾನೇನೂ ಮಾಡಲಾರೆ. ಆ ವಿಷವನ್ನು ಸಹಿಸುವ ಶಕ್ತಿ ನನಗಿಲ್ಲ." ಎಲ್ಲರಿಂದಲೂ ಇದೇ ರೀತಿಯ ಉತ್ತರ ಬಂತು. ಕೊನೆಗೆ ದೇವತೆಗಳು ಶಿವನೆಡೆಗೆ ಹೋದರು. ಶಿವನು ಧ್ಯಾನಮಗ್ನನಾಗಿದ್ದ. ದೇವತೆಗಳ ಪ್ರಾರ್ಥನೆಯನ್ನು ಕೇಳಿ ಕಣ್ತೆರೆದು, ತನ್ನಿಂದೇನಾಗಬೇಕೆಂದು ಕೇಳಿದನು. ದೇವತೆಗಳು ಹೇಳಿದರು: "ಜಗತ್ತು ದಹಿಸುತ್ತಿದೆ, ದಯವಿಟ್ಟು ಬಂದು ನಮ್ಮನ್ನು ರಕ್ಷಿಸು."

ಶಿವನು ಸಮುದ್ರದ ಸಮೀಪ ಹೋಗಿ ಜನರು ಕಂಗಾಲಾಗಿರುವುದನ್ನು ನೋಡುತ್ತಾನೆ. ಅವನು, "ನಾನು ಈ ವಿಷವನ್ನು ಕುಡಿಯುತ್ತೇನೆ. ಇದರ ಪರಿಣಾಮವಾಗಿ ನಾನು ಸಾಯಬಹುದು, ಆದರೆ ಜಗತ್ತು ಉಳಿಯುತ್ತದೆ," ಎಂದು ಹೇಳಿ ವಿಷವನ್ನು ಕುಡಿದೇಬಿಟ್ಟನು. ವಿಷ ತುಂಬ ಶಕ್ತಿಯುತವಾದದ್ದು, ಅದು ಅವನ ಕಂಠದಲ್ಲೇ ಸಿಕ್ಕಿಕೊಂಡುಬಿಟ್ಟಿತು. ಅಂದಿನಿಂದ ಅವನು ನೀಲಕಂಠನಾದನು. ಈ ಕಥೆಗೆ ಆಳ ಅರ್ಥವಿದೆ, ಈ ಕೆಳಗಿನ ಶ್ಲೋಕದಲ್ಲಿ ಅದು ವ್ಯಕ್ತವಾಗಿದೆ:

ತಪ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥೮.೭.೪೪ ॥

"ದಯಾಳು ವ್ಯಕ್ತಿಗಳು ಜನರ ದುಃಖದಿಂದ ದುಃಖಕ್ಕೊಳಗಾಗುತ್ತಾರೆ. ಇದೇ ಎಲ್ಲರ ಆತ್ಮನಾಗಿರುವ ಪುರುಷನ ಶ್ರೇಷ್ಠ ಆರಾಧನೆ."

ಜಗತ್ತು ಕಷ್ಟದಲ್ಲಿದೆ. ಸ್ವಾಭಾವಿಕವಾಗಿಯೇ ನಾವು ಇಂತಹ ದಯಾಳು ವ್ಯಕ್ತಿಗಳನ್ನು ಬಯಸುತ್ತೇವೆ. ನಾವು ದಯಾಪೂರ್ಣರಾದಾಗಲೇ ನಮ್ಮ ಭಗವದಾರಾಧನೆ ಯಥಾರ್ಥವಾಗುತ್ತದೆ. ನಾವು ಜನರ ಕಷ್ಟವನ್ನು ಪರಿಹರಿಸಲು ಪ್ರಯತ್ನಿಸಬೇಕು. ಅದೇ ನಿಜವಾದ ಆಧ್ಯಾತ್ಮಿಕತೆ.

ನಿಜವಾಗಿಯೂ ಶಿವ ನಮ್ಮೊಳಗೇ ಇರುವನು, ಕೈಲಾಸದಲ್ಲಲ್ಲ. ನಮ್ಮ ಮಿದುಳೇ ಶಿವನ ಸ್ಥಾನ. ನಮ್ಮ ಶೀಲದಲ್ಲಿ ಸ್ವಲ್ಪಮಟ್ಟಿಗಾದರೂ ಶಿವಸ್ವಭಾವ ವ್ಯಕ್ತವಾದರೆ ನಾವು ಎಲ್ಲ ಪ್ರಾಪಂಚಿಕ ವಿಷವನ್ನೂ ಜೀರ್ಣಿಸಿಕೊಳ್ಳಬಹುದು. ಪತಿ ಪತ್ನಿಯರು ಕೂಡಿ ಸಮುದ್ರಮಂಥನ ಮಾಡುತ್ತಾರೆ, ಅಂದರೆ ಜಗತ್ತಿನ ಸುಖವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಆದರೆ ಈ ಪ್ರಕ್ರಿಯೆಯಲ್ಲಿ ಕೆಲವೊಮ್ಮೆ ವಿಷವೂ ಕಾಣಿಸಿಕೊಳ್ಳುತ್ತದೆ, ಮತ್ತು ಅದು ಮಾನವೀಯ ಸಂಬಂಧದ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತದೆ. ವಿಷ ಬಂದಾಗ ಗಂಡನು ಅದನ್ನು ಹೆಂಡತಿಯ ಕಡೆ ತಳ್ಳುತ್ತಾನೆ, ಹೆಂಡತಿ ಅದನ್ನು ಗಂಡನ ಕಡೆ ತಳ್ಳುತ್ತಾಳೆ. ಒಂದು ದಿನ ಅದು ಸ್ಫೋಟಿಸುತ್ತದೆ, ಆಗ ದುಃಖ ಅಸಾಧ್ಯವಾಗುತ್ತದೆ. ನಿಮ್ಮ ಶಿವಸ್ವಭಾವದ ಮೂಲಕ ಈ ವಿಷವನ್ನು ಜೀರ್ಣಿಸಿಕೊಳ್ಳಲು ನಿಮಗೆ ಸಾಧ್ಯವಾದರೆ, ಆಗ ಸಮಸ್ಯೆ ಇರುವುದಿಲ್ಲ.

## ಮಹಾಬಲಿಯ ಕಥೆ

ಎಂಟನೆಯ ಸ್ಕಂಧದ ಹದಿನೈದನೆಯ ಅಧ್ಯಾಯದಲ್ಲಿ ಭಾಗವತವು ಮಹಾರಾಜ ಬಲಿಯ ಕಥೆಯನ್ನು ವಿವರಿಸುತ್ತದೆ. ಅವನ ರಾಜ್ಯದಲ್ಲಿ ಜಾತಿಪದ್ಧತಿಯೇ ಇರಲಿಲ್ಲವಂತೆ, ಎಲ್ಲರೂ ಸಮಾನರಾಗಿದ್ದರು. ಆದರೆ ಅಂದಿನ ಧರ್ಮಾಧಿಕಾರಿಗಳು ಅದನ್ನು ಇಷ್ಟಪಡಲಿಲ್ಲ. ಆದ್ದರಿಂದ ದೇವರು ವಾಮನನಾಗಿ ಅವತರಿಸಿದ. ವಾಮನನು ಈ ಕೆಳಗಿನ ಶ್ಲೋಕದ ಮೂಲಕ ಭಗವದನುಗ್ರಹ ಹೇಗೆ ಅವತರಿಸುತ್ತದೆ ಎಂಬುದನ್ನು ಸೂಚಿಸುತ್ತಾನೆ:

ಜನ್ಮಕರ್ಮವಯೋರೂಪವಿದ್ಯೈಶ್ವರ್ಯಧನಾದಿಭಿಃ ।
ಯದ್ಯಸ್ಯ ನ ಭವೇತ್ ಸ್ತಂಭ-
ಸ್ತತ್ರಾಯಂ ಮದನುಗ್ರಹಃ ॥ ೮.೨೨.೨೬ ॥

"ಉನ್ನತಕುಲ, ಸತ್ಕರ್ಮ, ಯೌವನ, ಸೌಂದರ್ಯ, ವಿದ್ಯೆ, ಐಶ್ವರ್ಯ ಇತ್ಯಾದಿಗಳನ್ನು ಹೊಂದಿದ್ದರೂ ಯಾರಾದರೂ ದುರಹಂಕಾರಕ್ಕೆ ಒಳಗಾಗದಿದ್ದರೆ ಇದು ನನ್ನ ಅನುಗ್ರಹ ಎಂದು ತಿಳಿ."

ಇಂದು ಭಾರತದಲ್ಲಿ ಅನೇಕ ಅಧಿಕಾರವಂತರೂ ಧನವಂತರೂ ಇದ್ದಾರೆ. ಅವರು ಹೆಮ್ಮೆ ದುರಭಿಮಾನಗಳಿಗೆ ಒಳಗಾಗದಿದ್ದರೆ ಭಗವದನುಗ್ರಹಕ್ಕೆ ಪಾತ್ರರಾಗುತ್ತಾರೆ. ಇದು ಈ ಶ್ಲೋಕ ಕಲಿಸುವ ಪಾಠ. *(ಮುಂದುವರೆಯುವುದು)*

### ಆಶ್ರಮದ ಕಾರ್ಯಕ್ರಮಗಳು
**ಅಕ್ಟೋಬರ್ 2003**

| | | |
|---|---|---|
| ದುರ್ಗಾಪೂಜಾ ಮಹಾಸಪ್ತಮಿ | ಗುರುವಾರ | 2 |
| ದುರ್ಗಾಪೂಜಾ ಮಹಾಷ್ಟಮಿ | ಶುಕ್ರವಾರ | 3 |
| ದುರ್ಗಾಪೂಜಾ ಮಹಾನವಮಿ | ಶನಿವಾರ | 4 |
| ವಿಜಯದಶಮಿ | ಭಾನುವಾರ | 5 |
| ಏಕಾದಶಿ | ಸೋಮವಾರ | 6 |
| ಏಕಾದಶಿ | ಮಂಗಳವಾರ | 21 |
| ಶ್ರೀಶ್ರೀ ಕಾಳೀ ಪೂಜಾ | ಶುಕ್ರವಾರ | 24 |